4) ಹಾಗಿದ್ದಲ್ಲಿ ಹಣ ಒದಗಿಸಲು 2001-02ನೇ ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

1) ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 90.16 ಕೋಟಿಗಳು. ಪ್ರಾರಂಭದಿಂದ ಜನವರಿ-01ರ ಅಂತ್ಯದವರೆಗೆ ರೂ. 34.05 ಕೋಟಿಗಳು ವೆಚ್ಚವಾಗಿರುತ್ತದೆ. ವರ್ಷವಾರು ವಿವರಗಳು ಕೆಳಕಂಡಂತಿದೆ:

ಕ್ರ.ಸಂ. Sl.No.	ವರ್ಷ Year	ವೆಚ್ಚ Expenditure
1.	1993-94	51.64
2.	1994-95	134.00
3.	1995-96	452.81
4.	1996-97	208.74
5.	1997-98	448.37
6.	1998-99	1351.90
7.	1999-2000	559.24
8.	2000-01 (ಜನವರಿ-01)	188.50
	ಒಟ್ಟು Total	**3405.70**

2) ಜೂನ್ 2003 ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

3) ಹೌದು, ಸರಕಾರದ ಗಮನಕ್ಕೆ ಬಂದಿದೆ.

4) ಹೌದು. 2001-2002ನೇ ಆಯವ್ಯಯದಲ್ಲಿ ಹಣ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಸ್ಥಳ ಬದಲಾವಣೆ:

27 (268) ಶ್ರೀ ಹೆಚ್.ಸಿ ಬಸವರಾಜ್ (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ಪಿರಿಯಾಪಟ್ಟಣ ಕ್ಷೇತ್ರದಲ್ಲಿ ವಿದ್ಯುತ್ ಕಂಬ ಹಾಗೂ ಕೆಲವೊಂದು ಟ್ರಾನ್ಸ್‌ಫಾರ್ಮರ್‌ಗಳ ಸ್ಥಳ ಬದಲಾವಣಾ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಪಿರಿಯಾಪಟ್ಟಣತಾಲ್ಲೂಕಿನ ವ್ಯಾಪ್ತಿಯಲ್ಲಿನ ಎಷ್ಟು ಗ್ರಾಮಗಳಲ್ಲಿ ಎಷ್ಟು ಕಂಬಗಳು ಬದಲಿಸಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇದರಲ್ಲಿ ಎಷ್ಟು ಆತ್ಯರ್ಥ ಪಡಿಸಲಾಗಿದೆ;

3) ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆಗೆ ತಿಳಿಸಲಾಗುವ ಸ್ಥಳ ಎಷ್ಟು; ಈ ಬಗ್ಗೆ ತೆಗೆದುಕೊಂಡ ಕ್ರಮವೇನು;

4) ಈ ಕಾಮಗಾರಿಗಳಲ್ಲಿ ವಿಳಂಬವಾಗುತ್ತಿದ್ದು ಇದಕ್ಕೆ ಕಾರಣವಾದ ವಿದ್ಯುತ್ ನಿಗಮದ ಮೇಲೆ ಕಟ್ಟು ನಿಟ್ಟಿನ ಕ್ರಮ ಜರುಗಿಸಲಾಗುವುದೆ?

ಶ್ರೀ ವೀರಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು, ಬಂದಿದೆ.

2) ಪಿರಿಯಾಪಟ್ಟಣ ತಾಲ್ಲೂಕಿನ ವ್ಯಾಪ್ತಿಯಲ್ಲಿ 3 ಗ್ರಾಮಗಳಲ್ಲಿ ಒಟ್ಟು 15 ಕಂಬಗಳನ್ನು ಬದಲಾಯಿಸಲು ಗುರುತಿಸಲಾಗಿದ್ದು, 13 ಕಂಬಗಳನ್ನು ಬದಲಾಯಿಸಲಾಗಿದೆ.

3) ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು 2 ಸ್ಥಳಗಳನ್ನು ಗುರುತಿಸಲಾಗಿದ್ದು, ಸ್ಥಳಾಂತರಿಸುವಿಕೆಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಗಳ ತಯಾರಿಕೆಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

4) ಈ ಕಾಮಗಾರಿಗಳನ್ನು ನಿಗಮದ ನಿಯಮದಂತೆ ಪೂರ್ಣಗೊಳಿಸಲು ವಿಳಂಬ ಮಾಡದೇ, ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಯೋಗಿಸದೇ ಇರುವ ಕುಡಿಯುವ ನೀರಿನ ಯೋಜನೆಗೆ ಅನಗತ್ಯವಾಗಿ ಕೆ.ಪಿ.ಟಿ.ಸಿ.ಎಲ್ ರವರು ಬಿಲ್ ಕಳುಹಿಸುತ್ತಿರುವುದು:

29 (270) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಉಪಯೋಗಿಸದೇ ಇರುವ ಕುಡಿಯುವ ನೀರಿನ ಯೋಜನೆಗಳಿಗೆ ಅನಗತ್ಯವಾಗಿ ಕೆ.ಪಿ.ಟಿ.ಸಿ.ಎಲ್. ರವರು ಬಿಲ್ ಕಳುಹಿಸಿ ರಾಜ್ಯದ ಎಲ್ಲಾ ಪಂಚಾಯತ್ ಮತಿಯಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಇಂತಹ ಎಷ್ಟು ಪ್ರಕರಣಗಳಿಗೆ ಹಣ ಪಡೆಯಲಾಗುತ್ತಿದೆ, ತಾಲ್ಲೂಕುವಾರು ಮಾಹಿತಿ ನೀಡುವುದು;

3) ಇದರಿಂದಾಗಿ ಗ್ರಾಮ ಪಂಚಾಯಿತಿಗೆ ಹಣ ತೊಂದರೆಯಾಗಲಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮವೇನು?